ಕರ್ನಾಟಕ ಉಚ್ಚ ನ್ಯಾಯಾಲಯ

(ಕಲಬುರಗಿ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಜಾನ್ ಮೈಕಲ್ ಕುನ್ಹಾ

ಮಲ್ಲಿಕಾರ್ಜುನ (ಮೃತ) ಕಾನೂನು ಸಮ್ಮತ ವಾರಸುದಾರರು -ವಿರುದ್ಧ ವಿಜಯಲಕ್ಷ್ಮೀ @ ಜಯಶ್ರೀ*

ರಿಟ್ ಅರ್ಜಿ ಸಂಖ್ಯೆ:204059/2018 (ಜಿ ಎಂ- ಸಿಪಿ ಸಿ) ದಿನಾಂಕ 22 ನೇ ಅಕ್ಟೋಬರ್, 2019

ಆಜ್ಞೆ

ನ್ಯಾಯಮೂರ್ತಿ ಶ್ರೀ ಜಾನ್ ಮೈಕಲ್ ಕುನ್ಹಾ:

ಮೃತ ಡಿಕ್ರಿಧಾರಕನು ಪ್ರಾರಂಭಿಸಿದ ಅಮಲ್ಜಾರಿ ವ್ಯವಹರಣೆಗಳನ್ನು ಮುಂದುವರೆಸುವುದಕ್ಕೆ ಅವನ ಕಾನೂನು ಸಮ್ಮತ ವಾರಸುದಾರರು ಉತ್ತರಾಧಿಕಾರ ಪ್ರಮಾಣ ಪತ್ರವನ್ನು ಹಾಜರುಪಡಿಸುವುದು ಅಗತ್ಯವೆ?ಎಂಬುದು ಈ ಅರ್ಜಿಯಲ್ಲಿ ಪರಿಗಣನೆಗಾಗಿ ಬಂದಿರುವ ಸಂಕ್ಷಿಪ್ತ ಪ್ರಶ್ನೆಯಾಗಿದೆ.

2. ಮೊಕದ್ದಮೆಯ ಸ್ಥೂಲ ಸಂಗತಿಗಳು ಮುಂದಿನಂತಿದೆ:ಗುರುಲಿಂಗಪ್ಪ ಕೌಜಲಗಿ ಮಗನಾದ ಶ್ರೀ ಮಲ್ಲಿಕಾರ್ಜುನ ಕರಾರಿನ ನಿರ್ದಿಷ್ಟ ಪಾಲನೆಯ ಪರಿಹಾರಕ್ಕಾಗಿ ಇದರಲ್ಲಿನ ಪ್ರತ್ಯರ್ಜಿದಾರರ ವಿರುದ್ಧ ಮೂಲ ದಾವೆಸಂಖ್ಯೆ: 54/2009 ಅನ್ನು ಹೂಡಿರುವನು.ಈ ದಾವೆಯೂ 26.11.2013 ರಂದು ಡಿಕ್ರಿಯಾಗಿದೆ.ಈ ತೀರ್ಪು ಮತ್ತು ಡಿಕ್ರಿಯನ್ನುದಿನಾಂಕ: 19.12.2015 ರಂದು 0 ಆರ್ಸಂಖ್ಯೆ: 03/2014 ರಲ್ಲಿ ಸ್ಥಿರೀಕರಣಗೊಂಡಿದೆ.ಅವನು ಇಂಡಿಯಲ್ಲಿರುವ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದ ಮುಂದೆ ಅಮಲ್ಜಾರಿ ಅರ್ಜಿಯನ್ನು ದಾಖಲಿಸಿರುವನು ಮತ್ತು ಅರ್ಜಿಯನ್ನು ದಾಖಲಿಸಿಕೊಂಡು ಅದಕ್ಕೆದಿನಾಂಕ: 18.01.2016 ರಂದು ಇ.ಪಿ.ಸಂ .11/2016 ಎಂದು ಸಂಖ್ಯೆ ನೀಡಲಾಗಿದೆ.ಡಿಕ್ರಿಧಾರಕನು ಪ್ರಸ್ತುತ ಅರ್ಜಿದಾರರನ್ನು ಅವನ ಕಾನೂನು ಸಮ್ಮತ ವಾರಸುದಾರರನ್ನಾಗಿ ಬಿಟ್ಟುದಿನಾಂಕ: 16.07.2016 ರಂದು ಮೃತನಾಗಿರುವನು.

3. ಅರ್ಜಿದಾರರುದಿನಾಂಕ: 04.08.2016 ರಂದು ಅರ್ಜಿಯಲ್ಲಿ ಮೃತ ಡಿಕ್ರಿಧಾರಕನ ಕಾನೂನು ಸಮ್ಮತ ವಾರಸುದಾರರನ್ನಾಗಿ ಅಭಿಲೇಖಿಸುವುದಕ್ಕೆ ಸಿವಿಲ್ ಪ್ರಕ್ರಿಯಾ ಸಂಹಿತೆಯ XXII ನೇ ಕ್ರಮಾದೇಶದ 3 ನೇ ನಿಯಮದ ಅಡಿಯಲ್ಲಿ ಅರ್ಜಿಯನ್ನು ದಾಖಲಿಸಿದ್ದು, ಈ ಅರ್ಜಿಗೆ ಪ್ರತ್ಯರ್ಜಿದಾರರು ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಿರುವರು.ಅಧಿವಿಚಾರಣಾ ನ್ಯಾಯಾಲಯವುದಿನಾಂಕ: 02.06.2017 ರ ತನ್ನ ಆದೇಶದ ಮೂಲಕ ಅರ್ಜಿಯನ್ನು ಪುರಸ್ಕರಿಸಿದೆ.ಸದರಿ ಆದೇಶವನ್ನು ಪ್ರಶ್ನಿಸಿ ಪ್ರತ್ಯರ್ಜಿದಾರರು ಈ ನ್ಯಾಯಾಲಯದ ಮುಂದೆ ರಿ.ಅ.ಸಂ .204171/2017 ನ್ನು ಹೂಡಿರುವರು.ರಿಟ್ ಅರ್ಜಿಯನ್ನು ಯುಕ್ತವೇದಿಕೆಯ ಮುಂದೆ ಯುಕ್ತವಾಗಿ ವ್ಯವಹರಣೆಗಳ ಮೂಲಕ ಪರಿಹರಿಸಿಕೊಳ್ಳುವ ಪ್ರತ್ಯರ್ಜಿದಾರನು ಸ್ವತಂತ್ರ ಹೊಂದುವುದರೊಂದಿಗೆ ರಿಟ್ ಅರ್ಜಿಯನ್ನು ಹಿಂದಕ್ಕೆ ಪಡೆದಂತೆಯೇ ಅರ್ಜಿಯನ್ನು ವಜಾಗೊಳಿಸಿತು.ತದನಂತರದಲ್ಲಿ ಪ್ರತ್ಯರ್ಜಿದಾರರು ಮುಖ್ಯ ಅರ್ಜಿಗೆ ತನ್ನ ಆಕ್ಷೇಪಣೆಗಳನ್ನು ದಾಖಲಿಸಿರುವರು.ಸದರಿ ಆಕ್ಷೇಪಣೆಗಳನ್ನು ಪರಿಗಣಿಸಿ, ದಿನಾಂಕ 23.08.2018 ರ (ಅನುಬಂಧ-ಎಫ್ ನೋಡಿ) ಪ್ರಶ್ನಿತ ಆದೇಶದ ಮೂಲಕ ಅಮಲ್ಜಾರಿ ನ್ಯಾಯಾಲಯವು ಅರ್ಜಿದಾರರು ದಾಖಲಿಸಿದ ಅರ್ಜಿಯನ್ನು ವಜಾಗೊಳಿಸಿದೆ ಮತ್ತು ಸಕ್ಷಮ ನ್ಯಾಯಾಲಯವು ನೀಡಿದ ಉತ್ತರಾಧಿಕಾರ ಪ್ರಮಾಣ ಪತ್ರವನ್ನು ಹಾಜರುಪಡಿಸಿದ ಮೇಲೆ ಉದ್ದೇಶಿತ ಡಿಕ್ರಿಧಾರಕನ ಕಾನೂನು ಸಮ್ಮತ ವಾರಸುದಾರರು ಯುಕ್ತ ಅರ್ಜಿಯನ್ನು ಸಲ್ಲಿಸುವವರೆಗೂ ಈ ಅಮಲ್ಜಾರಿ ವ್ಯವಹರಣೆಗಳನ್ನು ತಡೆಹಿಡಿಯಿತು.ಅಮಲ್ಜಾರಿ ನ್ಯಾಯಾಲಯವು ಭಾರತ ಉತ್ತರಾಧಿಕಾರ ಅಧಿನಿಯಮ, 1925 ರ 214 ( 1) (ಬಿ)

ಪ್ರಕರಣದ ದೃಷ್ಟಿಯಿಂದ ಮೃತ ಡಿಕ್ಕಿಧಾರಕನ ಕಾನೂನು ಸಮ್ಮತ ವಾರಸುದಾರರು ಉತ್ತರಾಧಿಕಾರ ಪ್ರಮಾಣಪತ್ರವನ್ನು ಹಾಜರು ಪಡಿಸಿದ ಹೊರತು ಅಮಲ್ದಾರಿ ಪ್ರಕ್ರಿಯೆಗೆ ಮುಂದುವರೆಯುವ ಹಕ್ಕನ್ನು ಹೊಂದಿರುವುದಿಲ್ಲ ಎಂದು ಅಭಿಪ್ರಾಯಪಟ್ಟಿತ್ತು.ಈ ಆದೇಶದಿಂದ ಬಾಧಿತರಾದ ಪ್ರಸ್ತುತ ಅರ್ಜಿದಾರರು ಭಾರತ ಸಂವಿಧಾನದ 226 ಮತ್ತು 227 ನೇ ಅನುಚ್ಛೇದದ ಅಡಿಯಲ್ಲಿ ಪ್ರಸ್ತುತ ಅರ್ಜಿಯನ್ನು ದಾಖಲಿಸಿರುವರು.

4. ಅರ್ಜಿದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳಾದ ಅಮೀತ್ ಕುಮಾರ್ ದೇಶಪಾಂಡೆಯವರು, ಈ ನ್ಯಾಯಾಲಯದ ಹೆಚ್.ವಿ. ವೀರಭದ್ರಯ್ಯ -ವಿರುದ್ಧ-ಹೆಚ್.ಎಸ್.ಕಂಠೀರವಾಚಾರ್ ಮತ್ತು ಇತರರು ಮೊಕದ್ದಮೆಯ ನಿರ್ಣಯವನ್ನು ಮತ್ತು ವಿ. ಉತಿರಪತಿ ವಿರುದ್ಧ ಅಶ್ರಬ್ ಅಲಿ ಮತ್ತು ಇತರರು ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿದ ನಿರ್ಣಯವನ್ನು, ಹಾಗೆಯೇ ರುಕ್ಸಾನ (ಶ್ರೀಮತಿ) ಮತ್ತು ಇತರರು ವಿರುದ್ಧ ನಜ್ರುನ್ನೀಸ (ಶ್ರೀಮತಿ) ಮತ್ತು ಮತ್ತೊಬ್ಬರು ಮೊಕದ್ದಮೆಯ ನಿರ್ಣಯವನ್ನ ಅವಲಂಬನೆಯಾಗಿ ಮಂಡಿಸುತ್ತಾ, ದಾವೆಯು, ಋಣ ಸಂದಾಯಕ್ಕಾಗಿ ಡಿಕ್ರಿಯನ್ನು ಕೋರಿದ ಹಣವನ್ನು ವಸೂಲಿ ಮಾಡುವುದಕ್ಕಾಗಿ ಹೂಡಿದ ಪಕ್ಷದಲ್ಲಿ ಮಾತ್ರ ಡಿಕ್ಕಿಧಾರಕನ ಕಾನೂನು ಸಮ್ಮತ ವಾರಸುದಾರರು ಉತ್ತರಾಧಿಕಾರ ಪ್ರಮಾಣಪತ್ರವನ್ನು ಸಲ್ಲಿಸುವುದನ್ನು ಅಗತ್ಯಪಡಿಸುವ ಭಾರತ ಉತ್ತರಾಧಿಕಾರ ಅಧಿನಿಯಮದ 214 ನೇ ಪ್ರಕರಣದ ಉಪಬಂಧಗಳನ್ನು ತಪ್ಪಾಗಿ ಅರ್ಥೈಸಿಕೊಂಡು ಅಧಿವಿಚಾರಣಾ ನ್ಯಾಯಾಲಯವು ಪ್ರಶ್ನಿತ ಆದೇಶವನ್ನು ಹೊರಡಿಸಿದ್ದು, ಅದು ಡಿಕ್ಕಿ ಹಣದ ಅಮಲ್ಜಾರಿಗೆ ಸಂಬಂಧಿಸಿದ ಮೊಕದ್ದಮೆಗಳಿಗೆ ಮಾತ್ರವೇ ಅನ್ವಯವಾಗುತ್ತದೆ ಎಂದು ನಿವೇದಿಸಿರುವರು.ಮಾನ್ಯ ನ್ಯಾಯವಾದಿಗಳು ತಮ್ಮ ನಿವೇದನೆಯನ್ನು ಮುಂದುವರೆಸಿ, ಪ್ರಸ್ತುತ ಮೊಕದ್ದಮೆಯಲ್ಲಿ ಮೂಲ ಡಿಕ್ರಿಧಾರಕನು ಕ್ರಯ ಒಪ್ಪಂದದ ನಿರ್ದಿಷ್ಟ ಪಾಲನೆಗಾಗಿ ಅಮಲ್ದಾರಿಯನ್ನು ನಿಗದಿಪಡಿಸಿರುವುದರಿಂದ ಈ ಮೊಕದ್ದಮೆಯ ಸಂಗತಿಗಳಿಗೆ ಭಾರತ ಉತ್ತರಾಧಿಕಾರ ಅಧಿನಿಯಮದ 214 ನೇ ಪ್ರಕರಣದ ಉಪಬಂಧಗಳು ಯುಕ್ತವಾಗಿ ಅನ್ವಯವಾಗುವುದಿಲ್ಲ ಎಂದು ನಿವೇದಿಸಿರುವರು.ನಿವೇದನೆಯನ್ನು ಮುಂದುವರೆಸಿ, ಭಾರತ ಉತ್ತರಾಧಿಕಾರ ಅಧಿನಿಯಮದ X ನೇ ಭಾಗದ ಅಡಿಯಲ್ಲಿ ಯೋಜಿಸಲಾದಂತೆ ಉತ್ತರಾಧಿಕಾರ ಪ್ರಮಾಣ ಪತ್ರವನ್ನು, ಮೃತನು ಯಾವ ಉತ್ತರಾಧಿಕಾರ ಪ್ರಮಾಣಪತ್ರಕ್ಕೆ ಹಕ್ಕುಳ್ಳವನಾಗಿದ್ದನೋ ಅಂಥ ಪತ್ರಕ್ಕೆ " ಸಾಲಗಳ ಅಥವಾ " ಭದ್ರತೆಗಳ " ವಸೂಲಾತಿಗಾಗಿ ಅಥವಾ ಹಿಂಪಡೆಯುವುದಕ್ಕಾಗಿ ಮಾತ್ರವೇ ನೀಡಬಹುದು ಎಂದು ವಾದಿಸಿದ್ದಾರೆ.ಆದ್ದರಿಂದ, ನಿರ್ದಿಷ್ಟ ಪಾಲನೆಗಾಗಿ ಡಿಕ್ರಿಯನ್ನು ಜಾರಿ ಮಾಡುವುದಕ್ಕಾಗಿ ಅಮಲ್ಜಾರಿ ಅರ್ಜಿಯನ್ನು ಮುಂದುವರಿಸುವುದಕ್ಕಾಗಿ ಉತ್ತರಾಧಿಕಾರ ಪ್ರಮಾಣ ಪತ್ರವನ್ನು ಆಗ್ರಹಿಸುವುದು ಭಾರತ ಉತ್ತರಾಧಿಕಾರ ಅಧಿನಿಯಮದ 214 ನೇ ಪ್ರಕರಣಕ್ಕೆ ವ್ಯತಿರಿಕ್ತವಾಗಿರುತ್ತದೆ.ವಾದಾಂಶವನ್ನು ಮುಂದುವರೆಸಿ, ಮೂಲ ಡಿಕ್ಕಿಧಾರಕನು ಅಮಲ್ಜಾರಿ ವ್ಯವಹಾರಣೆಗಳು ಇತ್ಯರ್ಥದಲ್ಲಿರುವಾಗಲೇ ಮರಣವನ್ನಪ್ಪಿದ್ದರಿಂದ ಮತ್ತು ಅರ್ಜಿದಾರರು ಡಿಕ್ಕಿಧಾರಕನ ಕಾನೂನು ಸಮ್ಮತ ವಾರಸುದಾರರಾಗಿರುವುದರಿಂದ ಸಿವಿಲ್ ಪ್ರಕ್ರಿಯಾ ಸಂಹಿತೆಯ 146 ನೇ ಪ್ರಕರಣದ ಅಡಿಯಲ್ಲಿ ಅಮಲ್ಜಾರಿಯ ವ್ಯವಹರಣೆಗಳಿಗೆ ಹಕ್ಕುಳ್ಳವರಾಗಿದ್ದು, ಈ ಅಂಶವನ್ನು ಅಮಲ್ಜಾರಿ ನ್ಯಾಯಾಲಯವು ಪರಿಗಣನೆಗೆ ತೆಗೆದುಕೊಂಡಿರುವುದಿಲ್ಲ.ಆದುದರಿಂದ ಪ್ರಶ್ನಿತ ಆದೇಶವು ಕಾನೂನಿಗೆ ವಿರೋಧವಾಗಿದೆ ಮತ್ತು ಭಾರತ ಸಂವಿಧಾನದ 226 ಮತ್ತು 227 ನೇ ಅನುಚ್ಛೇದದ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕಾನೂನಿನ ಸುಸ್ಥಾಪಿತ ಸಿದ್ಧಾಂತಗಳನ್ನು ತಳ್ಳಿಹಾಕಲು ಅರ್ಹವಾಗಿವೆಯೆಂದು ನಿವೇದಿಸಿರುವರು.

5. ಈ ನಿವೇದನೆಗಳಿಗೆ ವಿರುದ್ಧವಾಗಿ, ಪ್ರತ್ಯರ್ಜಿದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳು ಪ್ರಶ್ನಿತ ಆದೇಶವು ಪರಿಷ್ಕೃತಗೊಳಿಸಬಹುದಾದ ಆದೇಶವಾಗಿದೆಯೇ ಹೊರತು ರಿಟ್ ಅಧಿಕಾರವ್ಯಾಪ್ತಿಗೆ ಸಂಬಂಧಿಸಿದಂತೆ ತಿದ್ದುಪಡಿ ಮಾಡಲು ಸಾಧ್ಯವಾಗುವಂತೆ ಇಲ್ಲ ಎಂದು ವಾದಿಸಿ ರಿಟ್ ಅರ್ಜಿಯ ವಾಸ್ತವಿಕ ಸಮರ್ಥನೀಯತೆಯನ್ನು ಪ್ರಾರಂಭದಲ್ಲಿಯೇ ಟೀಕಿಸಿದ್ದಾರೆ.ಮಾನ್ಯ ನ್ಯಾಯವಾದಿಗಳು ತಮ್ಮ ಪ್ರತಿಪಾದನೆಗೆ ಪೂರಕವಾಗಿ, ಈ ನ್ಯಾಯಾಲಯ ಸಿಆರ್‌ಪಿಸಂ .276/2012ದಿನಾಂಕ: 06.11.2012 ರ ನಿರ್ಣಯವನ್ನು ಉಲ್ಲೇಖಿಸಿರುವರು.ಇದರಲ್ಲಿ ಈ ಈ ನ್ಯಾಯಾಲಯವು, ಸಿವಿಲ್ ಪಕ್ರಿಯಾ ಸಂಹಿತೆಯ 115 ನೇ ಪ್ರಕರಣವನ್ನು ತಿದ್ದುಪಡಿ ಮಾಡುವುದಕ್ಕೆ ಮೊದಲು ಮತ್ತು ತಿದ್ದುಪಡಿ ಮಾಡಿದ ನಂತರ ಅದರ ಬಗೆಗಿನ ವಿಶ್ಲೇಷಣೆಯ ಮೇಲೆ ಶಿವ ಶಕ್ತಿ ಕೋ-ಆಪರೇಟಿವ್ ಹೌಸಿಂಗ್ ಸೊಸೈಟಿ, ನಾಗ್ಪುರ್ -ವಿರುದ್ಧ-ಸ್ವರಾಜ್ ಡೆವಲಪರ್ ಮತ್ತು ಇತರರು* ಮೊಕದ್ದಮೆಯಲ್ಲಿ ಭಾರತದ ಘನ ಸರ್ವೋಚ್ಚ ನ್ಯಾಯಾಲಯವು ನೀಡಿದ ನಿರ್ಣಯವನ್ನು ಚ ಅವಲ ಂ ಬನೆಯಾಗಿ ಮಂಡಿಸಿರುವರು.ಅದರಲ್ಲಿ ಈ ಮು ಂ ದಿನ ಂ ತೆ ಅಭಿಪ್ರಾಯಪಡಲಾಗಿದೆ:

" 115 ನೇ ಪ್ರಕರಣವನ್ನು ಸರಳವಾಗಿ ಓದಿಕೊಂಡಾಗ, ಪುನರೀಕ್ಷಣೆಗಾಗಿ ಅರ್ಜಿಸಲ್ಲಿಸುವ ಪಕ್ಷಕಾರನ ಪರವಾಗಿ ಆದೇಶವು ಆ ದಾವೆಯನ್ನು ಅಥವಾ ಇತರ ವ್ಯವಹರಣೆಗೆ ಅಂತಿಮತೆಯನ್ನು ನೀಡಬೇಕಾಗಿದೆಯೇ?ಎಂಬ ಪ್ರಶ್ನೆಗೆ ಒತ್ತು ನೀಡಿರುವುದು ಸ್ಪಷ್ಟವಾಗುತ್ತದೆ.ಉತ್ತರವು ' ಹೌದು ' ಆಗಿದ್ದಲ್ಲಿ, ಪುನರೀಕ್ಷಣೆಯೂ ಸಮರ್ಥನೀಯವಾಗಿರುತ್ತದೆ.ಆದರೆ ಅದಕ್ಕೆ ತದ್ವಿರುದ್ಧವಾಗಿ ಉತ್ತರ ' ಇಲ್ಲ ' ಎಂದಾಗಿದ್ದಲ್ಲಿ, ಪುನರೀಕ್ಷಣೆಯೂ ಸಮರ್ಥನೀಯ ವಾಗಿರುವುದಿಲ್ಲ.ಆದುದರಿಂದ ಪ್ರಶ್ನಿತ ಆದೇಶವು ಮಧ್ಯಂತರ ಆದೇಶದ ಸ್ವರೂಪದಲ್ಲಿದ್ದರೆ ಅಥವಾ ದಾವೆಯನ್ನು ಅಂತಿಮವಾಗಿ ನಿರ್ಣಯಿಸದಿದ್ದರೆ ಪುನರೀಕ್ಷಣೆಯ ಸಮರ್ಥನೀಯ ವಾಗಿರುವುದಿಲ್ಲ. '

6. ಪ್ರತ್ಯರ್ಜಿದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳು ಮಂಡಿಸಿದ ವಾದಾಂಶದಲ್ಲಿ, ಅಮಲ್ದಾರಿ ಅರ್ಜಿಯನ್ನು ಪ್ರಶ್ನಿತ ಆದೇಶವು ಅಂತಿಮವಾಗಿ ಮುಕ್ತಾಯಗೊಳಿಸಿರುವುದರಿಂದ.ಅರ್ಜಿದಾರರಿಗೆ ಇರುವ ಏಕೈಕ ಪರಿಹಾರವೆಂದರೆ ಸದರಿ ಆದೇಶವನ್ನು ಪುನರೀಕ್ಷಣೆಯಲ್ಲಿ ಪ್ರಶ್ನಿಸುವುದಾಗಿದೆಯೇ ಹೊರತು, ಸದರಿ ಆದೇಶವನ್ನು ಭಾರತ ಸಂವಿಧಾನದ 226 ಮತ್ತು 227 ನೇ ಅನುಚ್ಛೇದ ಅಡಿಯಲ್ಲಿ ಪ್ರಶ್ನಿಸಲು ಸಾಧ್ಯವಾಗದು ಎಂದು ನಿವೇದಿಸಿರುವರು.ಮೊಕದ್ದಮೆಯ ಗುಣಾರ್ಹತೆಗೆ ಸಂಬಂಧಪಟ್ಟಮಟ್ಟಿಗೆ, ಮಾನ್ಯ ನ್ಯಾಯವಾದಿಗಳು, ಭಾರತ ಉತ್ತರಾಧಿಕಾರ ಅಧಿನಿಯಮದ 214 ನೇ ಪ್ರಕರಣದ ಅಡಿಯಲ್ಲಿನ ಪ್ರತಿಷೇಧ ದೃಷ್ಟಿಯಿಂದ ಅರ್ಜಿದಾರರು ಮೃತ ಡಿಕ್ರಿಧಾರಕನ ಸಂಪದವನ್ನು ಪ್ರತಿನಿಧಿಸುವುದಕ್ಕೆ ತಮ್ಮ ಹಕ್ಕು ಸ್ವಾಮ್ಯತೆಯ ಸಾಕ್ಷ್ಯವಾಗಿ ಪ್ರಮಾಣ ಪತ್ರ ಅಥವಾ ಪ್ರೊಬೇಟ್ ಅಥವಾ ಆಡಳಿತ ಪತ್ರಗಳನ್ನು ಹಾಜರು ಪಡಿಸದೆ ಅಮಲ್ದಾರಿ ವ್ಯವಹರಣೆಗೆ ಹಕ್ಕುಳ್ಳವರಾಗಿರುವುದಿಲ್ಲ.ಆದುದರಿಂದಲೇ ಅಮಲ್ದಾರಿ ನ್ಯಾಯಾಲಯ ಅರ್ಜಿಯನ್ನು ತಿರಸ್ಕರಿಸಿರುವುದು ಸಮರ್ಥನೀಯವಾಗಿದೆ ಮತ್ತು ಈ ಅರ್ಜಿಯನ್ನು ವಜಾಗೊಳಿಸಬೇಕೆಂದು ಪ್ರಶ್ನಿತ ಆದೇಶಕ್ಕೆ ಪೂರಕವಾಗಿ ವಾದಿಸಿದ್ದಾರೆ.

7. ನಾನು ಪಕ್ಷಕಾರರು ಪ್ರತಿವಾದಿಸಿದ ಪ್ರತಿವಾದದ ವಾದಾಂಶಗಳನ್ನು ನನ್ನ ಗಮನಕ್ಕೆ ತಂದುಕೊಂಡಿದ್ದೇನೆ ಮತ್ತು ದಾಖಲೆಯಲ್ಲಿನ ಸಾಕ್ಷ್ಯಾಧಾರಗಳನ್ನು ಅದರಲ್ಲೂ ನಿರ್ದಿಷ್ಟವಾಗಿ ಭಾರತ ಉತ್ತರಾಧಿಕಾರ ಅಧಿನಿಯಮ, 1925 ರ 214 ನೇ ಪ್ರಕರಣ ಮತ್ತು ಸಂಬಂಧಿತ ಉಪಬಂಧಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿದ್ದೇನೆ.

8. ಅರ್ಜಿಯ ಸಮರ್ಥನೀಯತೆಗೆ ಸಂಬಂಧಿಸಿದಂತೆ ಅರ್ಜಿದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳು ವಾದಿಸಿದ ಮೊದಲ ವಾದಾಂಶಕ್ಕೆ ಬರುವುದಾದರೆ, ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ಈ ವಾದಕ್ಕೆ, ಪ್ರಶ್ನಿತ ಆದೇಶದ ಮೂಲಕ ಅಮಲ್ಜಾರಿ ನ್ಯಾಯಾಲಯದ ಮುಂದಿನ ವ್ಯವಹರಣೆಗಳನ್ನು ಮುಕ್ತಾಯಗೊಳಿಸಲಾಗಿದೆ ಎಂಬ ವಾದವನ್ನು ಆಧರಿಸಿದ್ದಾಗ್ಯೂ, ಪ್ರಶ್ನಿತ ಆದೇಶ ಓದಿಕೊಂಡಾಗ XXII ನೇ ಕ್ರಮಾದೇಶದ 3 ನೇ ನಿಯಮದ ಅಡಿಯಲ್ಲಿ ಅರ್ಜಿದಾರರು ದಾಖಲಿಸಿದ ಅರ್ಜಿಯನ್ನು ವಜಾಗೊಳಿಸುವಾಗ, ಅರ್ಜಿದಾರರು ಉತ್ತರಾಧಿಕಾರ ಪ್ರಮಾಣ ಪತ್ರವನ್ನು ಹಾಜರುಪಡಿಸುತ್ತಾರೆಂದು ನಿರೀಕ್ಷಿಸಿ ಅಮಲ್ಜಾರಿ ಅರ್ಜಿಯನ್ನು ಇತ್ಯರ್ಥದಲ್ಲಿ ಇಡಲಾಗಿದೆ ಎಂಬುದು ಸ್ಪಷ್ಟವಾಗುತ್ತದೆ.ಇದರಿಂದ ಈ ಸಂಗತಿಯ ಮೇಲೆ ಅವಲ್ಜಾರಿ ನ್ಯಾಯಾಲಯದ ಮುಂದಿನ ವ್ಯವಹರಣೆಗಳು ಮುಕ್ತಾಯಗೊಂಡಿರುವುದಿಲ್ಲವಾದ್ದರಿಂದ ಈ ಸಂಬಂಧದಲ್ಲಿ ಅರ್ಜಿದಾರರು ವಾದಿಸಿದ ವಾದಾಂಶವು ತಿರಸ್ಕರಿಸಲು ಅರ್ಹವಾಗಿರುತ್ತದೆ.ಹಾಗಲ್ಲದಿದ್ದರೂ, ಸುಸ್ಥಾಪಿತ ಕಾನೂನಿನ ಪ್ರಕಾರ ಪ್ರಶ್ನಿತ ಆದೇಶವು ಪುನರೀಕ್ಷಣೆಗೆ ಸಂಬಂಧಿಸಿದಂತೆ ತಿದ್ದುಪಡಿ ಮಾಡುವಂತಿದೆಯೇ?ಎಂಬುದನ್ನು ನಿರ್ಧರಿಸುವ ಪರೀಕ್ಷೆಯು, ಪ್ರಶ್ನಿತ ಆದೇಶವು ಪ್ರತಿಕೂಲವಾಗಿದ್ದರೆ ದಾವೆ ಅಥವಾ ಇತರ ವ್ಯವಹರಣೆಗಳಿಗೆ ಅಂತಿಮತೆಯನ್ನು ನೀಡಬೇಕಾಗಿತ್ತೇ?ಎಂಬುದನ್ನು ಕಂಡುಕೊಳ್ಳುವುದಾಗಿದೆ.ಉತ್ತರವು ' ಹೌದು ' ಆಗಿದ್ದ ಪಕ್ಷದಲ್ಲಿ ಪುನರೀಕ್ಷಣೆಯೂ ಸಮರ್ಥನೀಯವಾಗಿದೆ.ಆದರೆ ಅದಕ್ಕೆ ವಿರುದ್ಧವಾಗಿ ಉತ್ತರವು ' ಇಲ್ಲ ' ಎಂದಾದಲ್ಲಿ ಪುನರೀಕ್ಷಣಾ ಅರ್ಜಿಯೂ ಸಮರ್ಥನೀಯವಾಗಿರುವುದಿಲ್ಲ.ಪ್ರಸ್ತುತ ಮೊಕದ್ದಮೆಯಲ್ಲಿ ಅರ್ಜಿದಾರರು ಸಲ್ಲಿಸಿದ ಅರ್ಜಿಯ ಸ್ವರೂಪವನ್ನು ಪುರಸ್ಕರಿಸಿದರೆ ಅದು ಅಮಲ್ಜಾರಿ ಅರ್ಜಿಯಾಗಿ ಮುಂದುವರೆಯುವುದಕ್ಕೆ ಅವಕಾಶವಾಗುತ್ತದೆಯೇ ಹೊರತು ಅಮಲ್ಜಾರಿ ಅರ್ಜಿಯು ಮುಕ್ತಾಯಗೊಳ್ಳುವುದಿಲ್ಲ.ಇದಲ್ಲದೆ, ಪ್ರಶ್ನಿತ ಆದೇಶವು ಮಧ್ಯಂತರ ಸ್ವರೂಪದಲ್ಲಿ ಇರುವುದರಿಂದ, ಅದು ದಾವೆಯನ್ನು ಅಂತಿಮವಾಗಿ ನಿರ್ಣಯಿಸುವುದಿಲ್ಲ.ಆದುದರಿಂದಲೇ ಮನರೀಕ್ಷಣೆಯೂ ಸಮರ್ಥನೀಯವಾಗಿರುವುದಿಲ್ಲ ಮತ್ತು ಅರ್ಜಿದಾರರಿಗಿರುವ ಸೂಕ್ತ ಪರಿಹಾರವೆಂದರೆ ಭಾರತ ಸಂವಿಧಾನದ 227 ನೇ ಅನುಚ್ಛೇದವನ್ನು ಅನ್ವಯಿಸುವುದಾಗಿದೆ.ವಸ್ತು ವಿಷಯವನ್ನು ಈ ದೃಷ್ಟಿಕೋನದಲ್ಲಿ ಅರ್ಜಿದಾರರು ಮಂಡಿಸಿದ ಮೊದಲ ವಾದಾಂಶವನ್ನು ತಿರಸ್ಕರಿಸಬಹುದಾಗಿದೆ.

9. ಮೂಲ ಡಿಕ್ರಿಧಾರಕನು ವಿಧಿಸಿದ ಅಮಲ್ಜಾರಿಯನ್ನು ಮುಂದುವರೆಸುವುದಕ್ಕೆ ಉತ್ತರಾಧಿಕಾರ ಪ್ರಮಾಣ ಪತ್ರದ ಅಗತ್ಯತೆಗೆ ಸಂಬಂಧಿಸಿದಂತೆ ಅರ್ಜಿಯಲ್ಲಿ ಒಳಗೊಂಡ ವಾಸ್ತವಿಕ ವಿವಾದದ ಕಡೆ ಗಮನ ಹರಿಸಿದಾಗ, ಪ್ರಸ್ತುತ ಮೊಕದ್ದಮೆಯಲ್ಲಿ, ಸ್ವತಃ ಡಿಕ್ರಿಧಾರಕನೇ ಅಮಲ್ಜಾರಿಗಾಗಿ ಮೊದಲು ಅರ್ಜಿಯನ್ನು ದಾಖಲಿಸಿರುವನೇ ಹೊರತು ಅವರ ಕಾನೂನು ಸಮ್ಮತ ವಾರಸುದಾರರು ಅಥವಾ ಹಸ್ತಾಂತರ ಪಡೆದವರು ದಾಖಲಿಸಿರುವುದಿಲ್ಲ ಎಂಬುದನ್ನು ಮೊದಲು ಗಮನಿಸಬೇಕಾಗಿದೆ.ಕರಾರಿನ ನಿರ್ದಿಷ್ಟಪಾಲನೆಗಾಗಿ ಮಾತ್ರ ಅಮಲ್ಜಾರಿಯ ಅಡಿಯಲ್ಲಿ ಡಿಗ್ರಿ ಸಲ್ಲಿಸಲಾಗಿತ್ತು.ಅಮಲ್ಜಾರಿ ಅರ್ಜಿ ಇತ್ಯರ್ಥದಲ್ಲಿರುವಾಗಲೇ ಡಿಕ್ರಿಧಾರಕನು ಮರಣ ಹೊಂದಿರುತ್ತಾನೆ.ಈ ಸಂದರ್ಭದಲ್ಲಿನ ಕಾನೂನಿನ ಪ್ರಸ್ತಾವನೆಯಲ್ಲಿ, ಡಿಕ್ರಿಧಾರಕನು ಅಥವಾ ತೀರ್ಪು ಋಣಿಯು ಅಮಲ್ಜಾರಿ ಅರ್ಜಿಯನ್ನು ದಾಖಲಿಸಿದ ತರುವಾಯ ಮರಣ ಹೊಂದಿದ ಪಕ್ಷದಲ್ಲಿ, ಇಂತಹ ಸಂದಿಗ್ಧ ಪ್ರಕರಣಗಳಲ್ಲಿನ ಕಾನೂನಿನ ಸ್ಥಿತಿಯನ್ನು ಮೇಲೆ ಉಲ್ಲೇಖಿಸಲಾದ ವಿ. ಉತಿರಪತಿ ಮೊಕದ್ದಮೆಯಲ್ಲಿ ಘನ ಸರ್ವೋಚ್ಚ ನ್ಯಾಯಾಲಯ ನಿರೂಪಿಸಿದ್ದು, ಅದರ ಸುಸಂಗತ ಉದ್ಧೃತಭಾಗವನ್ನು ಈ ಕೆಳಗೆ ಉದ್ಧರಿಸಲಾಗಿದೆ:

" ಆದ್ದರಿಂದ, ಸಕಾಲದಲ್ಲಿ ಅಮಲ್ಜಾರಿ ಅರ್ಜಿಯನ್ನು ದಾಖಲಿಸಿದ ತರುವಾಯ ಡಿಕ್ರಿಧಾರಕನು ಮರಣವನ್ನಪ್ಪಿದರೆ ಮತ್ತು ಅವನ ಕಾನೂನು ಸಮ್ಮತ ವಾರಸುದಾರರನ್ನು ಅಧಿಕೃತವಾಗಿ ದಾಖಲಿಸಿಲ್ಲದಿದ್ದರೆ

ಅಥವಾ ತೀರ್ಪು ಋಣಿಯು ಮರಣವನ್ನಪ್ಪಿದರೆ ಮತ್ತು ಅವನ ಕಾನೂನು ಸಮ್ಮತ ವಾರಸುದಾರರನ್ನು ಅಧಿಕೃತವಾಗಿ ದಾಖಲಿಸಲಿಲ್ಲದಿದ್ದರೆ, ಆಗ ಅಮಲ್ಜಾರಿ ಅರ್ಜಿಯ ಕೊನೆಗೊಳ್ಳುವುದಿಲ್ಲ ಎಂಬುದು ಸ್ಪಷ್ಟವಾಗಿದೆ.ಅಮಲ್ಜಾರಿ ಅರ್ಜಿಯೂ ಮುಕ್ತಾಯವಾಗದಿದ್ದರೆ, ಕಾನೂನು ಕಣ್ಣಿನ ಅಮಲ್ಜಾರಿ ಅರ್ಜಿಯು ಅಮಲ್ದಾರಿ ನ್ಯಾಯಾಲಯದ ದಾಖಲೆಗಳಲ್ಲಿ ಹಾಗೇ ಇತ್ಯರ್ಥವಾಗದೆ ಉಳಿದುಕೊಳ್ಳುತ್ತದೆಂಬುದು ಕಾನೂನಿನ ದೃಷ್ಟಿಯ ಪ್ರತಿಪಾದನೆಯಾಗಿದೆ.ಅದು ಹಾಗೆ ಇತ್ಯರ್ಥವಾಗದೆ ಉಳಿದಿದ್ದರೆ ಮತ್ತು ಅಮಲ್ಜಾರಿ ವ್ಯವಹರಣೆಗಳಲ್ಲಿನ ದಾಖಲೆಗಳಲ್ಲಿ ಕಾನೂನು ಸಮ್ಮತ ವಾರಸುದಾರರನ್ನು ಅಧಿಕೃತವಾಗಿ ದಾಖಲಿಸಲು ಯಾವುದೇ ನಿಯಮಿಸಲಾದ ಕಾಲಪರಿಮಿತಿ ಇಲ್ಲದಿದ್ದರೆ, ಇಂತಹ ಸಂದರ್ಭದಲ್ಲಿ ಡಿಕ್ಕಿಧಾರಕನು ಮರಣವನ್ನಪ್ಪಿದರೆ ಅವನ ಕಾನೂನು ಸಮ್ಮತ ವಾರಸುದಾರರನ್ನು ಯಾವುದೇ ಕಾಲದಲ್ಲಿ ದಾಖಲಿಸಲು ಮುಕ್ತ ಅವಕಾಶವಿರುತ್ತದೆ.ಅಮಲ್ಜಾರಿ ಅರ್ಜಿಯನ್ನು ಡಿಕ್ಕಿಧಾರಕನ ಕಾನೂನು ಸಮ್ಮತ ವಾರಸುದಾರರಿಗೆ ಗೊತ್ತಿಲ್ಲದಂತೆ ರಹಸ್ಯವಾಗಿಯೂ ಸಹ ಮಾಡುವ ಂ ತೆ ಇಲ್ಲ. ತೀರ್ಪು ಋಣಿಯು ಮರಣವನ್ನಪ್ಪಿದ ಸಂದರ್ಭದಲ್ಲಿ, ಡಿಕ್ಕಿಧಾರಕನು ಯಾವುದೇ ಕಾಲದಲ್ಲಿ ತೀರ್ಪು ಋಣಿಯ ಕಾನೂನು ಸಮ್ಮತ ವಾರಸುದಾರರನ್ನು ದಾಖಲೆಯಲ್ಲಿ ಸೇರಿಸುವಂತೆ ಅರ್ಜಿಯನ್ನು ದಾಖಲಿಸಬಹುದಾಗಿದೆ.ಯಾವುದೇ ಸಂದರ್ಭದಲ್ಲೂ, ಅಮಲ್ಜಾರಿ ಅರ್ಜಿಯನ್ನು ಮುಕ್ತಾಯಗೊಂಡಿದೆ ಎಂದು ವಜಾಗೊಳಿಸಲು ಸಾಧ್ಯವಾಗದು.ಪರಾಯವಾಗಿ, ಡಿಕ್ಕಿಧಾರಕನು ಮರಣಹೊಂದಿದ ಸಂದರ್ಭದಲ್ಲಿ ಹೊಸದಾದ ಅಮಲ್ಜಾರಿ ಅರ್ಜಿಯನ್ನು ದಾಖಲಿಸುವುದಕ್ಕೆ ಸಹ ಮೃತ ಡಿಕ್ರಿಧಾರಕನ ಕಾನೂನು ಸಮ್ಮತ ವಾರಸುದಾರರಿಗೆ ಅವಕಾಶವಿರುತ್ತದೆ ಅಥವಾ ತೀರ್ಪು ಋಣಿಯು ಮರಣ ಹೊಂದಿದ ಸಂದರ್ಭದಲ್ಲಿ, ತೀರ್ಪು ಋಣಿಯ ಕಾನೂನು ಸಮ್ಮತ ವಾರಸುದಾರರನ್ನು ಕಕ್ಷಿದಾರರನ್ನಾಗಿ ಸೇರಿಸಲು ಡಿಕ್ಕಿಧಾರಕನು ಹೊಸದಾದ ಅಮಲ್ದಾರಿ ಅರ್ಜಿಯನ್ನು ದಾಖಲಿಸಬಹುದು; ಅಂಥ ಹೊಸದಾದ ಅಮ ಮಲ್ಜಾರಿ ಅರ್ಜಿಯನ್ನು ದಾಖಲಿಸಿದ್ದ ಪಕ್ಷದಲ್ಲಿ, ಕಾನೂನಿನಲ್ಲಿ ಪ್ರಾರಂಭದಲ್ಲಿಯೇ ಡಿಕ್ಕಿಧಾರಕನು ಸಕಾಲದಲ್ಲಿ ಅಮಲ್ಜಾರಿ ಅರ್ಜಿಯನ್ನು ದಾಖಲಿಸಿದ್ದರೆ ಅಂಥ ಇತ್ಯರ್ಥದಲ್ಲಿರುವ ಅಮಲ್ದಾರಿ ಅರ್ಜಿಯು ಮಾತ್ರ ಮುಂದುವರೆಯುತ್ತದೆ.ಇದು ಸಿವಿಲ್ ಪ್ರಕ್ರಿಯಾ ಸಂಹಿತೆಯಲ್ಲಿ ಹೇಳಲಾದ ಕಾನೂನಿನ ವಸ್ತುಸ್ಥಿತಿಯಾಗಿದೆ."

10. ಅಮಲ್ದಾರಿಯನ್ನು ಒಮ್ಮೆ ನ್ಯಾಯೋಕ್ತವಾಗಿ ಹೂಡಿದರೆ, ಮೃತ ಡಿಕ್ಕಿಧಾರಕನ ಕಾನೂನು ಸಮ್ಮತ ವಾರಸುದಾರರನ್ನು ಅಧಿಕೃತವಾಗಿ ದಾಖಲಿಸಿದ ಹೊರತು ಅಮಲ್ದಾರಿಯ ಪ್ರಕ್ರಿಯೆಯನ್ನು ಮುಂದುವರೆಸಲು ಸಾಧ್ಯವಾಗದು ಎಂಬ ಮೇಲಿನ ನಿರ್ಣಯದಲ್ಲಿ ನಿರೂಪಿಸಲಾದ ಕಾನೂನಿನ ಪ್ರಸ್ತಾವನೆಗಳು ಸಂಹಿತೆಯ 146 ನೇ ಪ್ರಕರಣದಲ್ಲಿ ಅಭಿವ್ಯಕ್ತವಾಗಿದೆ.ಸದರಿ ಪ್ರಕರಣವು ಮೃತ ಡಿಕ್ರಿಧಾರಕನ ಕಾನೂನು ಸಮ್ಮತ ವಾರಸುದಾರರನ್ನು ಮೃತ ಡಿಕ್ರಿಧಾರಕನ ಸ್ಥಾನದಲ್ಲಿ ಅಧಿಕೃತವಾಗಿ ದಾಖಲಿಸಲು ಕಾನೂನು ಸಮ್ಮತ ವಾರಸುದಾರರಿಗೆ ಅವಕಾಶ ಕಲ್ಪಿಸುತ್ತದೆ.ಸಂಹಿತೆಯ 146 ನೇ ಪ್ರಕರಣವು ಈ ಕೆಳಗಿನಂತೆ ಓದಿಕೊಳ್ಳುವುದು:

" 146:ಈ ಸಂಹಿತೆಯ ಮೂಲಕ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅನ್ಯಥಾ ಉಪಬಂಧಿಸಿರುವುದನ್ನು ಉಳಿದು, ಯಾರೇ ವ್ಯಕ್ತಿಯು ಅಥವಾ ಯಾರೇ ವ್ಯಕ್ತಿಯ ವಿರುದ್ಧವಾಗಿ ಯಾವುದೇ ವ್ಯವಹರಣೆಯನ್ನು ನಡೆಸ ಬಹುದಾಗಿರುವಲ್ಲಿ ಅಥ ವಾ ಅಜಿ ೯ಂ ತನು ಸಲ್ಲಿಸಬಹುದಾಗಿರುವಲ್ಲಿ, ಅವನ ಅಧೀನವಾಗಿ ಕ್ಲೇಮು ಮಾಡುವ ಯಾರೇ ವ್ಯಕ್ತಿಯು ಅಥವಾ ಆ ವ್ಯಕ್ತಿಯ ವಿರುದ್ಧ ವ್ಯವಹರಣೆಯನ್ನು ನಡೆಸಬಹುದು ಅಥವಾ ಅರ್ಜಿಯನ್ನು ಸಲ್ಲಿಸಬಹುದು."

11. ಅಧಿವಿಚಾರಣಾ ನ್ಯಾಯಾಲಯವು, ಅರ್ಜಿಯನ್ನು ಪರಿಗಣಿಸುವಾಗ, ಸಿವಿಲ್ ಪ್ರಕ್ರಿಯಾ ಸಂಹಿತೆಯ 146 ನೇ ಪ್ರಕರಣವನ್ನು ತನ್ನ ಗಮನಕ್ಕೆ ತಂದುಕೊಳ್ಳುವಲ್ಲಿ ವಿಫಲವಾಗಿದೆ.ಬದಲಾಗಿ, ಭಾರತ ಉತ್ತರಾಧಿಕಾರ ಅಧಿನಿಯಮ, 1925 ರ 214 ನೇ ಪ್ರಕರಣವನ್ನು ಏಕಮಾತ್ರವಾಗಿ ಆಧಾರವಾಗಿಟ್ಟುಕೊಂಡು ಅರ್ಜಿದಾರರು ದಾಖಲಿಸಿದ ಅರ್ಜಿಯನ್ನು ತಿರಸ್ಕರಿಸಿದೆ.ಮೇಲೆ ನಿರೂಪಿಸಲಾದ ಸಂಗತಿಯ ಹಿನ್ನೆಲೆಯಲ್ಲಿ, ನನ್ನ ಅಭಿಪ್ರಾಯದಲ್ಲಿ, ಭಾರತ ಉತ್ತರಾಧಿಕಾರ ಅಧಿನಿಯಮದ 214 ನೇ ಪ್ರಕರಣದ ಅನ್ವಯವನ್ನು ಕೋರುವುದು ಸಂಪೂರ್ಣವಾಗಿ ತಪ್ಪು ಗ್ರಹಿಕೆಯಿಂದ ಕೂಡಿದೆಯಲ್ಲದೆ, ಅಧಿಕ ಪ್ರಸಂಗವಾಗಿದೆ.ಉತ್ತರಾಧಿಕಾರ ಅಧಿನಿಯಮದ 214 ನೇ ಪ್ರಕರಣದ ಉದ್ಧೃತ ಭಾಗವು ಕೆಳಗಿನಂತಿದೆ:

"214. ಮೃತರ ಋಣಿಗಳಿಂದ ಋಣಗಳನ್ನು ನ್ಯಾಯಾಲಯಗಳ ಮೂಲಕ ವಸೂಲಿ ಮಾಡಲು ಪ್ರಾತಿನಿಧಿಕ ಸ್ವಾಮ್ಯದ ರುಜುವಾತು ಪೂರ್ವ ಷರತ್ತಾಗಿರುವುದು:( 1) ಯಾವುದೇ ನ್ಯಾಯಾಲಯವು, ಮೃತನ ಸ್ವತ್ತಿಗೆ ಅಥವಾ ಅದರ ಯಾವುದೇ ಭಾಗಕ್ಕೆ ಉತ್ತರಾಧಿಕಾರದ ಮೇಲೆ ಹಕ್ಕುಳ್ಳವನಾಗಿರುವುದಾಗಿ ಕ್ಲೇಮು ಮಾಡುವ ವ್ಯಕ್ತಿಯು,

(i) ಮೃತನ ಎಸ್ಟೇಟಿನ ಆಡಳಿತವನ್ನು ಆ ವ್ಯಕ್ತಿಗೆ ಕೊಟ್ಟಿರುವುದನ್ನು ಸಾಕ್ಷೀಕರಿಸುವ ಪ್ರೊಬೇಟು ಅಥವಾ ಆಡಳಿತಾಧಿಕಾರ ಪತ್ರವನ್ನು; ಅಥವಾ

(ii) ಅಡ್ಮಿನಿಸ್ಟ್ರೇಟರ್ ಜನರಲ್ ಅಧಿನಿಯಮ, 1913 ರ (1913 ರ 3) ಇದರ 31 ಮತ್ತು 32 ನೇ ಪ್ರಕರಣದ ಮೇರೆಗೆ ಋಣವನ್ನು ನಮೂದಿಸಿ ನೀಡಿರುವ ಪ್ರಮಾಣ ಪತ್ರವನ್ನು ಅಥವಾ

(iii) x ನೇ ಭಾಗದ ಮೇರೆಗೆ ಆ ಋಣವನ್ನು ನಿರ್ದಿಷ್ಟಪಡಿಸಿ ನೀಡಿದ ಉತ್ತರಾಧಿಕಾರ ಪ್ರಮಾಣಪತ್ರವನ್ನು; ಅಥವಾ

(iv) ಉತ್ತರಾಧಿಕಾರ ಪ್ರಮಾಣಪತ್ರ ಅಧಿನಿಯಮ, 1889 ರ (1889 ರ 7) ಮೇರೆಗೆ ನೀಡಿದ ಪ್ರಮಾಣಪತ್ರವನ್ನು; ಅಥವಾ

( ೪) ಮುಂಬೈ ರೆಗ್ಯೂಲೇಷನ್ಸಂಖ್ಯೆ: 1827 ರ VIII ರ ಮೇರೆಗೆ ನೀಡಿದ ಪ್ರಮಾಣಪತ್ರವನ್ನು, ಮತ್ತು ಋಣವನ್ನು ನಿರ್ದಿಷ್ಟಪಡಿಸಿ ಅದನ್ನು 1889 ರ ಮೇ ಮೊದಲೇ ದಿವಸದ ತರುವಾಯ ನೀಡಿದ್ದರೆ, ಅಂಥ ಪ್ರಮಾಣಪತ್ರವನ್ನು ಹಾಜರುಪಡಿಸಿದ ಮೇಲಲ್ಲದೆ,

(ಎ) ಮೃತನ ಋಣಿಯ ವಿರುದ್ಧ ಹಾಗೆ ಕ್ಲೇಮು ಮಾಡುವ ವ್ಯಕ್ತಿಗೆ ಅವನ ಋಣ ಸಂದಾಯಕ್ಕಾಗಿ ಡಿಗ್ರಿಯನ್ನು ಮಾಡತಕ್ಕದ್ದಲ್ಲ; ಅಥವಾ

(ಬಿ) ಹಾಗೆ ಹಕ್ಕುಳ್ಳವನಾಗಿ ಕ್ಲೇಮು ಮಾಡುವ ವ್ಯಕ್ತಿಯು ಮಾಡಿದ ಅರ್ಜಿಯ ಮೇಲೆ ಅವನ ಋಣದ ಸಂದಾಯಕ್ಕಾಗಿನ ಡಿಕ್ರಿ ಅಥವಾ ಆದೇಶವನ್ನು ಅಂಥ ಋಣಿಯ ವಿರುದ್ಧ ಜಾರಿಗೊಳಿಸಲು ಕ್ರಮ ಕೈಗೊಳ್ಳತಕ್ಕದ್ದಲ್ಲ.

( 2) ( 1) ನೇ ಉಪ ಪ್ರಕರಣದಲ್ಲಿನ ಋಣ ಎ ಂ ಬ ಪದವು, ಕೃಷಿ ಉದ್ದೇಶಗಳಿಗಾಗಿ ಉಪಯೋಗಿಸಿದ ಭೂಮಿಗೆ ಸಂಬಂಧಿಸಿದಂತೆ ಸ ಂ ದಾ ಂ ತ ಮಾಡಲಾದ ಬಾಡಿಗೆ, ಕ ಂ ದಾಯ ಅಥವಾ ಲಾಭಗಳನ್ನು ಹೊರತುಪಡಿಸಿ, ಯಾವುದೇ ಋಣವನ್ನು ಒಳಗೊಳ್ಳುತ್ತದೆ."

12. ಮೇಲಿನ ಪ್ರಕರಣವನ್ನು ಸರಳವಾಗಿ ಓದಿಕೊಂಡಾಗ, ಉತ್ತರಾಧಿಕಾರದ ಮೇಲೆ ಕೇಮು ಮಾಡಿದ ಒಬ್ಬ ವ್ಯಕ್ತಿಯು ಅಮಲ್ಜಾರಿ ವ್ಯವಹರಣೆಗಳನ್ನು ಹೂಡುವುದನ್ನು ನಿಷೇಧಿಸುತ್ತದೆಯೇ ಹೊರತು, ಡಿಕ್ರಿಧಾರಕನು ಈಗಾಗಲೇ ಹೂಡಿರುವ ಅಮಲ್ದಾರಿ ವ್ಯವಹರಣೆಗಳನ್ನು ಮುಂದುವರೆಸುವುದನ್ನು ಪ್ರತಿಷೇಧಿಸುವುದಿಲ್ಲ ಎಂಬುದು ಸ್ಪಷ್ಟವಾಗುತ್ತದೆ.ಅಮಲ್ಜಾರಿ ನ್ಯಾಯಾಲಯವು ಕಾನೂನಿನ ವಸ್ತುಸ್ಥಿತಿಯನ್ನು ಅರ್ಥೈಸಿಕೊಳ್ಳುವಲ್ಲಿ ವಿಫಲವಾದ ಪರಿಣಾಮದಿಂದ ತಪ್ಪಾದ ಆದೇಶವನ್ನು ಅದು ಹೊರಡಿಸಿದೆ.

13. ದಾಖಲೆಯಲ್ಲಿನ ಸಂಪೂರ್ಣ ಸಾಕ್ಷ್ಯಾಧಾರಗಳನ್ನು ಪರಿಗಣಿಸಿದ ಮೇಲೆ, ಮೇಲಿನ ಪ್ರಮುಖ ಸಂಗತಿಗಳ ಹಿನ್ನೆಲೆಯಲ್ಲಿ, ನನ್ನ ಅಭಿಪ್ರಾಯದಲ್ಲಿ, ಅಮಲ್ದಾರಿ ನ್ಯಾಯಾಲಯ ಸ್ವತಃ ಭಾರತ ಉತ್ತರಾಧಿಕಾರ ಅಧಿನಿಯಮದ 214 ನೇ ಪ್ರಕರಣವನ್ನು ಅವಲಂಭಿಸುವಲ್ಲಿ ಸ್ವತಃ ತಪ್ಪು ನಿರ್ದೇಶನವನ್ನು ಮಂಡಿಸಿದೆ.ಭಾರತ ಉತ್ತರಾಧಿಕಾರ ಅಧಿನಿಯಮದ 214 (ಬಿ) ಪ್ರಕರಣದಲ್ಲಿ ಬಳಕೆಯಾಗಿರುವ ಪದಾವಳಿಯು " ಹಾಗೆ ಹಕ್ಕುಳ್ಳವನಾಗಿ ಕ್ಲೇಮು ಮಾಡುವ ವ್ಯಕ್ತಿಯು ಮಾಡಿದ ಅರ್ಜಿಯ ಮೇಲೆ ಅವನ ಋಣದ ಸಂದಾಯಕ್ಕಾಗಿನ ಡಿಕ್ಕಿ ಅಥವಾ ಆದೇಶವನ್ನು ಅಂಥ ಋಣಿಯ ವಿರುದ್ಧ ಜಾರಿಗೊಳಿಸುವ " ಎಂಬ ಪದಾವಳಿಯಿಂದ, ಸದರಿ ಪ್ರಕರಣವು ಉತ್ತರಾಧಿಕಾರವನ್ನು ಕ್ಲೇಮುಮಾಡುವ ವ್ಯಕ್ತಿಗೆ ಅವನ ಋಣಗಳ ಸಂದಾಯಕ್ಕಾಗಿ ಮೃತನಾದ ಋಣಿಯ ವಿರುದ್ಧ ಡಿಕ್ಕಿ ಹೊರಡಿಸುವುದರಿಂದ ಅಥವಾ ಅದರಲ್ಲಿ ನಿರ್ದಿಷ್ಟಪಡಿಸಿದ ಋಣವನ್ನು ದೃಷ್ಟಿಯಲ್ಲಿಟ್ಟುಕೊಂಡು ವಿವಿಧ ಅಧಿನಿಯಮಗಳ ಅಡಿಯಲ್ಲಿ ನೀಡಲಾಗುವ ಉತ್ತರಾಧಿಕಾರ ಪ್ರಮಾಣಪತ್ರವನ್ನು ಹಾಜರು ಪಡಿಸದೆ ಋಣಗಳ ಸಂದಾಯಕ್ಕಾಗಿ ಅಂಥಾ ಋಣಿಯ ವಿರುದ್ಧ ಡಿಕ್ಕಿ ಅಥವಾ ಆದೇಶವನ್ನು ಜಾರಿಗೊಳಿಸುವುದರಿಂದ ನ್ಯಾಯಾಲಯವನ್ನು ಪ್ರತಿಬಂಧಿಸುತ್ತದೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ.ಆದ್ದರಿಂದ, ಭಾರತ ಉತ್ತರಾಧಿಕಾರ ಅಧಿನಿಯಮದ 214 ನೇ ಪ್ರಕರಣವನ್ನು ಋಣದ ಸಂದಾಯಕ್ಕೆ ಸಂಬಂಧಿಸಿದ ಡಿಗ್ರಿಗೆ ಅನ್ವಯಿಸಲು ಮಾತ್ರವೇ ಸೀಮಿತವಾಗಿದೆ.ಈ ಪ್ರಕರಣವು, ಸ್ಥಿರಾಸ್ತಿಯ ಸ್ವಾಧೀನತೆ ಪಡೆಯುವುದಕ್ಕಾಗಿ ಹೂಡಿದ ದಾವೆಗಳಿಗೆ, ಅಥವಾ ಸ್ಥಿರಾಸ್ತಿಗೆ ಸಂಬಂಧಿಸಿದ ಕರಾರಿನ ನಿರ್ದಿಷ್ಟ ಪಾಲನೆಗಾಗಿ ಅಥವಾ ಅಂಥ ಡಿಗ್ರಿಗಳ ಅಮಲ್ಜಾರಿಗಾಗಿ ಹೂಡಿದ ದಾವೆಗಳಿಗೆ ಈ ಪ್ರಕರಣವು ಅನ್ವಯವಾಗುವುದಿಲ್ಲ.ಇತರ ಮಾತುಗಳಲ್ಲಿ ಹೇಳುವುದಾದರೆ, ಈ ಪ್ರಕರಣದ ಅಭಿವ್ಯಕ್ತಿ ಭಾಷೆಯ ಪ್ರಕಾರದಂತೆ ಹಣದ ವಸೂಲಾತಿಗಾಗಿ ಅಥವಾ ಹಣದ ಡಿಕ್ಕಿಯ ಅಮಲ್ದಾರಿಗೆ ಸಂಬಂಧದಲ್ಲಿ ಹೂಡಿದ ದಾವೆಗಳ ವಸ್ತುವಿಷಯಗಳಿಗೆ ಮಾತ್ರವೇ ಅದು ಅನ್ವಯವಾಗುತ್ತದೆ.

14. ಭಾರತ ಉತ್ತರಾಧಿಕಾರ ಅಧಿನಿಯಮದ 214 ನೇ ಪ್ರಕರಣದ ವ್ಯಾಪ್ತಿ ಮತ್ತು ವೈಶಾಲ್ಯತೆಯನ್ನು ಅರ್ಥೈಸಿಕೊಳ್ಳುವ ಸಲುವಾಗಿ, ಡಿಕ್ರಿಧಾರಕನಿಗೆ ಬಾಕಿ ಇರುವ ಋಣವನ್ನು ವಸೂಲು ಮಾಡುವುದಕ್ಕೆ ಕಾನೂನು ಸಮ್ಮತವಾಗಿ ಹಕ್ಕುಳ್ಳ ಯಾರೇ ವ್ಯಕ್ತಿಗೆ ಡಿಕ್ರಿಯ ಅಡಿಯಲ್ಲಿ ಬಾಕಿ ಸಂದಾಯವನ್ನು ಮಾಡಲಾಗಿದೆಯೆಂದು ಖಚಿತಪಡಿಸಿಕೊಳ್ಳುವ ಮೂಲಕ ಋಣಿಯ ಹಿತಾಸಕ್ತಿಯನ್ನು ಸಂರಕ್ಷಿಸುವುದೇ ಭಾರತ ಉತ್ತರಾಧಿಕಾರ ಅಧಿನಿಯಮದ 214 ನೇ ಪ್ರಕರಣದ ಹಿಂದಿರುವ ಉದ್ದೇಶವಾಗಿದೆ ಎಂಬುದನ್ನು ಗಮನಿಸುವುದು ಅವಶ್ಯಕ.214 ನೇ ಪ್ರಕರಣದ ಶೀರ್ಷಿಕೆಯೂ ಸಹ " ಪ್ರಾತಿನಿಧಿಕ ಸ್ವಾಮ್ಯದ ರುಜುವಾತು " ಅನ್ನು ಸೂಚಿಸುತ್ತಿದ್ದು, ಅದು " ಮೃತರ ಋಣಿಗಳಿಂದ ಋಣಗಳನ್ನು ನ್ಯಾಯಾಲಯಗಳ ಮೂಲಕ ವಸೂಲಿ ಮಾಡಲು ಪ್ರಾತಿನಿಧಿಕ ಸ್ವಾಮ್ಯದ ರುಜುವಾತು ಪೂರ್ವಷರತ್ತಾಗಿರುವುದು.ಮೃತ ಜಮೆದಾರರಿಗೆ ಬಾಕಿ ಇರುವ ಋಣಗಳನ್ನು ಮತ್ತು ಭದ್ರತೆಗಳನ್ನು ಸಂಗ್ರಹಿಸುವ ಅನುಕೂಲತೆಗೆ ಮಾತ್ರವೇ ಉತ್ತರಾಧಿಕಾರ ಪ್ರಮಾಣಪತ್ರವನ್ನು ಮಂಜೂರು ಮಾಡಲಾಗುವುದು ಎಂಬುದು ಹಳೆಯ ಕಾನೂನಾಗಿದೆ.ಮೃತನ ಸ್ಥಿರಾಸ್ತಿಗೆ ಸ್ವಾಮ್ಯತೆಯನ್ನು ನೀಡಲಾಗಲೀ ಅಥವಾ ಸ್ಥಿರಾಸ್ತಿಯ

ಸಂಬಂಧದಲ್ಲಿ ಸ್ವಾಮ್ಯದ ರುಜುವಾತಾಗಿ ಮಂಜೂರು ಮಾಡಲಾಗಲೀ ಸಾಧ್ಯವಿಲ್ಲ.ಉಯಿಲನ್ನು ಬರೆದಿಡದೆ ಮರಣ ಹೊಂದಿದ ವ್ಯಕ್ತಿಯ ಸ್ವತ್ತಿನ ಸಂಬಂಧದಲ್ಲಿ ಭಾರತ ಉತ್ತರಾಧಿಕಾರ ಅಧಿನಿಯಮದ 212 ನೇ ಪ್ರಕರಣಕ್ಕನುಸಾರವಾಗಿ ನೀಡಲಾದ ಆಡಳಿತ ಪತ್ರದ ಮೂಲಕವಾಗಲೀ ಅಥವಾ ಭಾರತ ಉತ್ತರಾಧಿಕಾರ ಅಧಿನಿಯಮದ 213 ನೇ ಪ್ರಕರಣದ ಅಡಿಯಲ್ಲಿ ಉಪಬಂಧಿಸಿದಂತೆ ಮೃತನು ಉಯಿಲನ್ನು ಬರೆದಿಡದೆ ಮರಣ ಹೊಂದಿದಾಗ, ಉಯಿಲು ನಿರ್ವಾಹಕ ಅಥವಾ ದಾಯಗ್ರಾಹಿಯಾಗಿ ಹಕ್ಕನ್ನು ಕ್ಲೇಮು ಮಾಡಿದಾಗ ಉಯಿಲನ್ನು ಲಗತ್ತಿಸಿ ಅಥವಾ ಲಗತ್ತಿಸದೆ ಅಥವಾ ಆಡಳಿತ ಪತ್ರದ ಮೂಲಕ ಮೃತನ ಸ್ಥಿರಾಸ್ತಿಯ ಮೇಲೆ ಪ್ರಾತಿನಿಧಿಕ ಸ್ವಾಮ್ಯವನ್ನು ಸ್ಥಾಪಿಸಬಹುದು.ಆದುದರಿಂದ, ಮತ್ತೊಂದು ಆಯಾಮದಿಂದ ನೋಡಿದಾಗ, ಕರಾರಿನ ನಿರ್ದಿಷ್ಟ ಪಾಲನೆಗಾಗಿ ಡಿಕ್ರಿಯನ್ನು ಜಾರಿಮಾಡುವುದಕ್ಕಾಗಿ ಮೂಲ ಡಿಕ್ರಿಧಾರಕನ ಕಾನೂನು ಸಮ್ಮತ ವಾರಸುದಾರರು ಅಮಲ್ಜಾರಿಯನ್ನು ಮುಂದುವರೆಸುವುದಕ್ಕೆ ಉತ್ತರಾಧಿಕಾರ ಪ್ರಮಾಣಪತ್ರವನ್ನು ಆಗ್ರಹಿಸುವುದನ್ನು ಭಾರತ ಉತ್ತರಾಧಿಕಾರ ಅಧಿನಿಯಮದ 214 ನೇ ಪ್ರಕರಣದ ಅಡಿಯಲ್ಲಿ ಯೋಜಿಸಲಾಗಿಲ್ಲ.

15. ಪ್ರಶ್ನಿತ ಆದೇಶವನ್ನು ಅವಲೋಕಿಸಿದಾಗ, ಅಧಿ ವಿಚಾರಣಾ ನ್ಯಾಯಾಲಯವು, XXII ನೇ ಕ್ರಮಾದೇಶದ 12 ನೇ ನಿಯಮವು, ಡಿಕ್ರಿ ಅಥವಾ ಆದೇಶದ ಅಮಲ್ದಾರಿಯಲ್ಲಿನ ವ್ಯವಹರಣೆಗಳಿಗೆ 3 9, 4 ಮತ್ತು 8 ನೇ ನಿಯಮಗಳನ್ನು ಅನ್ವಯಿಸುವುದನ್ನು ಹೊರತುಪಡಿಸುತ್ತದೆಂಬ ಕಾರಣಕ್ಕಾಗಿ ಅರ್ಜಿದಾರರು ದಾಖಲಿಸಿದ ಅರ್ಜಿಯನ್ನು ತಿರಸ್ಕರಿಸಿರುವುದು ಕಂಡುಬರುತ್ತದೆ.ಈ ಸಂಬಂಧದಲ್ಲಿ ಸಹ ಅಧಿವಿಚಾರಣಾ ನ್ಯಾಯಾಲಯವು ಸಂಹಿತೆಯ XXII ನೇ ಕ್ರಮಾದೇಶದ 12 ನೇ ನಿಯಮದ ನೈಜ ತಾತ್ಪರ್ಯ ಮತ್ತು ಉದ್ದೇಶವನ್ನು ಪರಿಗಣನೆಗೆ ತೆಗೆದುಕೊಳ್ಳುವಲ್ಲಿ ಅದು ವಿಫಲವಾಗಿದೆ.ದಾವೆ ಅಥವಾ ವ್ಯವಹರಣೆಗಳು ಇತ್ಯರ್ಥದಲ್ಲಿರುವ ಅವಧಿಯಲ್ಲಿ ವಾದಿ ಅಥವಾ ಪ್ರತಿವಾದಿಯೂ ಮರಣ ಹೊಂದಿದ ಸಂದರ್ಭದಲ್ಲಿ ಅಥವಾ ವಾದಿಯೂ ದಿವಾಳಿಯಾದ ಸಂದರ್ಭದಲ್ಲಿ ದಾವೆ ಅಥವಾ ವ್ಯವಹರಣೆಗಳನ್ನು ರದ್ದು ಮಾಡುವ ಬಗ್ಗೆ ಸಂಹಿತೆಯ 3, 4 ಮತ್ತು 8 ನೇ ನಿಯಮಗಳು ಚರ್ಚಿಸುತ್ತವೆಂಬುದು ಸಂಹಿತೆಯ ಸ್ಕೀಂನಿಂದ ಸುಸ್ಪಷ್ಟವಾಗುತ್ತದೆ.ಆದರೆ ಹಾಗೆಯೇ ಈಗಾಗಲೇ ಮೇಲೆ ಚರ್ಚಿಸಲಾದಂತೆ, ಅಮಲ್ಜಾರಿ ಅರ್ಜಿಯು, ದಾವೆ ಅಥವಾ ಅಪೀಲುಗಳಂತಲ್ಲದೆ, ಡಿಕ್ರಿಧಾರಕನ ಅಥವಾ ತೀರ್ಪು ಋಣಿಯ ಮರಣದ ನಂತರ ರದ್ದುಗೊಳ್ಳುವುದಿಲ್ಲ.ಮೇಲೆ ಉಲ್ಲೇಖಿಸಿದ ನಿರ್ಣಯದಲ್ಲಿ ಹೇಳಿರುವಂತೆ, ಸಕಾಲದಲ್ಲಿ ಅಮಲ್ಜಾರಿ ಅರ್ಜಿಯನ್ನು ದಾಖಲಿಸಿದ ತರುವಾಯ, ಡಿಕ್ರಿಧಾರಕನು ಮರಣ ಹೊಂದಿದ ಪಕ್ಷದಲ್ಲಿ ಮತ್ತು ಅವನು ಕಾನೂನು ಸಮ್ಮತ ವಾರಸುದಾರರನ್ನು ಅಧಿಕೃತ ದಾಖಲೆಯಲ್ಲಿ ಬರದಿದ್ದರೆ ಅಥವಾ ತೀರ್ಪು ಋಣಿ ಮತ್ತು ಅವನ ಕಾನೂನು ಸಮ್ಮತ ವಾರಸುದಾರರನ್ನು ಅಧಿಕೃತ ದಾಖಲೆಯಲ್ಲಿ ಬರದಿದ್ದರೆ, ಆಗ ಅಮಲ್ಜಾರಿ ಅರ್ಜಿಯನ್ನು ರದ್ದುಪಡಿಸಲಾಗುವುದಿಲ್ಲ.ಡಿಕ್ರಿಧಾರಕನ ಕಾನೂನು ಸಮ್ಮತ ವಾರಸುದಾರರಿಗೆ ಗೊತ್ತಿಲ್ಲದಂತೆಯೂ ಅಮಲ್ಜಾರಿ ಅರ್ಜಿಯನ್ನು ವಜಾಗೊಳಿಸಲು ಸಾಧ್ಯವಾಗುವುದಿಲ್ಲ.ಕಾನೂನು ಸಮ್ಮತ ವಾರಸುದಾರರು ಅಧಿಕೃತವಾಗಿ ದಾಖಲಿಸಲು ಅಥವಾ ಮೊಕದ್ದಮೆ ನಡೆಸಲು ಯಾವಾಗಲೂ ಮುಕ್ತ ಅವಕಾಶ ಹೊಂದಿರುತ್ತಾರೆ.ಅಮಲ್ದಾರಿ ವ್ಯವಹರಣೆಗಳಲ್ಲಿನ ರದ್ದಿಯಾತಿಯನ್ನು ವಜಾಗೊಳಿಸುವುದಕ್ಕೆ ಯಾವುದೇ ಅರ್ಜಿಯನ್ನು ಹೂಡಲಾಗುವುದಿಲ್ಲವಾದ್ದರಿಂದ ಈ ಕಾನೂನಿನ ನಿರೂಪಣೆಯಿಂದಾಗಿ XXII ನೇ ಕ್ರಮಾದೇಶದ 3, 4 ಮತ್ತು 8 ನೇ ನಿಯಮಗಳನ್ನು ಅಥವಾ ಆದೇಶದ ಅಮಲ್ದಾರಿಯಲ್ಲಿನ ವ್ಯವಹರಣೆಗಳಿಗೆ ಅನ್ವಯ ಮಾಡಲು ಸಾಧ್ಯವಾಗದು.

16. ಈ ಹಿನ್ನೆಲೆಯಲ್ಲಿ, ಅಮಲ್ದಾರಿ ಅರ್ಜಿಯು ಇತ್ಯರ್ಥದಲ್ಲಿರುವ ಅವಧಿಯಲ್ಲಿ ಡಿಕ್ರಿಧಾರಕನು ಅಥವಾ ತೀರ್ಪು ಋಣಿಯು ಮರಣ ಹೊಂದಿದ ಸಂದರ್ಭದಲ್ಲಿ, ಸಂಹಿತೆಯ 146 ನೇ ಪ್ರಕರಣ ಮತ್ತು XXI ನೇ

ಕ್ರಮಾದೇಶದ 16 ನೇ ನಿಯಮವು, ಸಂದರ್ಭನುಸಾರ ಮೃತ ಡಿಕ್ಕಿಧಾರಕನ ಅಥವಾ ಮೃತ ತೀರ್ಪು ಋಣಿಯ ಸ್ಥಾನದಲ್ಲಿ ಮೃತ ಡಿಕ್ಕಿಧಾರಕನ ಅಥವಾ ಮೃತ ತೀರ್ಪು ಋಣಿಯ ಕಾನೂನು ಸಮ್ಮತ ವಾರಸುದಾರರನ್ನು ಅಧಿಕೃತವಾಗಿ ದಾಖಲಿಸಲು ಸಮರ್ಥಗೊಳಿಸುತ್ತದೆ ಎಂದು ಸೂಚಿಸುವುದು ತದ್ವಿರುದ್ಧವಾಗಬಹುದು.ಸಿವಿಲ್ ಪ್ರಕ್ರಿಯಾ ಸಂಹಿತೆಯ XXI ನೇ ಕ್ರಮಾದೇಶದ 16 ನೇ ನಿಯಮದಲ್ಲಿರುವ " ಕಾನೂನಿನ ಕಾರ್ಯಚರಣೆಯ ಮೂಲಕ " ಎಂಬ ಅಭಿವ್ಯಕ್ತಿಯು ಮೃತನ ಕಾನೂನು ವಾರಸುದಾರರಿಗೆ ಆನುವಂಶಿಕ ಪ್ರಾಪ್ತಿಯಾಗಿ ಅಥವಾ ಉತ್ತರಾಧಿಕಾರ (ಮರಣ ಶಾಸನ ಅಥವಾ ಉಯಿಲು ಪತ್ರ) ದ ಮೂಲಕ ಆಸ್ತಿಯ ಹಕ್ಕು ವರ್ಗಾವಣೆಯಾಗುವುದನ್ನು ಒಳಗೊಳ್ಳುತ್ತದೆ.ಈ ಉಪಬಂಧದ ಬಲದಿಂದ, ಮೃತ ಡಿಕ್ಕಿಧಾರಕನ ಅಥವಾ ಅವನ ಅಧಿಕೃತ ಹಸ್ತಾಂತರಗ್ರಾಹಿಗಳ ಕಾನೂನು ಸಮ್ಮತ ವಾರಸುದಾರರು, ಸಂದರ್ಭಾನುಸಾರ ಡಿಕ್ರಿಧಾರಕನು ಅಥವಾ ಡಿಕ್ರಿ ಹಸ್ತಾಂತರಕನು ದಿವಾಳಿಯಾದ ಸಂದರ್ಭದಲ್ಲಿ ವಾರಸುದಾರ ಪ್ರಮಾಣಪತ್ರವನ್ನು ಹಾಜರುಪಡಿಸದೆ ಡಿಗ್ರಿಯ ಅಮಲ್ಜಾರಿಯನ್ನು ಮುಂದುವರೆಸುವ ಹಕ್ಕು ಎಂಬಂತೆ ಅದನ್ನು ಅಧಿಕೃತವಾಗಿ ದಾಖಲಿಸಲು ಹಕ್ಕುಳ್ಳವರಾಗಿರುತ್ತಾರೆ.ಹೀಗಾಗಿ ಈ ಪ್ರತಿಪಾದನೆಯನ್ನು ಸ್ಪಷ್ಟಪಡಿಸುವ ಸಲುವಾಗಿ, ಮೇಲಿನ ಕಾನೂನು ಉಪಬಂಧಗಳಿಗೆ ಮತ್ತು ಮೇಲೆ ಚರ್ಚಿಸಲಾದ ಪೂರ್ವ ನಿದರ್ಶನಗಳಿಂದ ಹೊರ ಹೊಮ್ಮಿದ ಕಾನೂನಿನ ತತ್ವಗಳನ್ನು ಇದರಲ್ಲಿ ಕೆಳಗೆ ಸಂಕ್ಷಿಪ್ತವಾಗಿ ನೀಡಲಾಗಿದೆ:

( 1) ಉತ್ತರಾಧಿಕಾರವನ್ನು ಕ್ಲೇಮು ಮಾಡುವ ವ್ಯಕ್ತಿಗಳು, ಬಾಕಿ ಇರುವ ಅಥವಾ ಸಂದಾಯ ಮಾಡಬೇಕಾದ " C ಋಣ " ದ ಸಂದಾಯ ಅಥವಾ ವಸೂಲಾತಿಗಾಗಿ ಮತ್ತು ಅಥವಾ ಅಂಥ ಡಿಕ್ಕಿಯ ಅಮಲ್ದಾರಿಗಾಗಿ ಕ್ಲೇಮು ಮಾಡಿದಾಗ ಮಾತ್ರ ಭಾರತ ಉತ್ತರಾಧಿಕಾರ ಅಧಿನಿಯಮದ X ನೇ ಭಾಗದ ಅಡಿಯಲ್ಲಿ ಅಥವಾ 214 ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಇತರ ಅಧಿನಿಯಮಗಳ ಅಡಿಯಲ್ಲಿನ ಉತ್ತರಾಧಿಕಾರ ಪ್ರಮಾಣ ಪತ್ರವನ್ನು ಕಾನೂನಿನ ನ್ಯಾಯಾಲಯದ ಮುಂದೆ ಮಂಡಿಸುವುದು ಅಗತ್ಯ.

(2) ಭಾರತ ಉತ್ತರಾಧಿಕಾರ ಅಧಿನಿಯಮದ 214 ನೇ ಪ್ರಕರಣದ ಅಡಿಯಲ್ಲಿನ ಪ್ರತಿಷೇಧವು, ಮೃತನಿಗೆ ಸಂದಾಯವಾಗಬೇಕಾದ ಋಣಗಳ ವಸೂಲಾತಿಗಾಗಿ ಮತ್ತು ಅಥವಾ ಮೃತನಿಗೆ ಬಾಕಿ ಇರುವ ಋಣಗಳ ಅಥವಾ ಭದ್ರತೆಗಳ ಸಂದಾಯ ಅಥವಾ ವಸೂಲಿಗಾಗಿ ಮೃತನು ಪಡೆದುಕೊಂಡ ಡಿಕ್ಕಿಯ ಅಮಲ್ದಾರಿಗಾಗಿ ದಾವೆಯನ್ನು ಹೂಡುವುದಕ್ಕಾಗಿ ಮಾತ್ರವೇ ಅನ್ವಯವಾಗುತ್ತದೆ.

(3) ಭಾರತ ಉತ್ತರಾಧಿಕಾರ ಅಧಿನಿಯಮದ 214 ನೇ ಪ್ರಕರಣವು ಋಣ ಅಥವಾ ಭದ್ರತೆ ಸ್ವರೂಪದಲ್ಲಿ ಹಣದ ವಸೂಲಾತಿಗಾಗಿ ಮತ್ತು ಹಣದ ಡಿಗ್ರಿಗಳ ಅಮಲ್ದಾರಿಗಾಗಿ ಹೂಡುವ ದಾವೆಯ ಸಂದರ್ಭದಲ್ಲಿ ಮಾತ್ರವೇ ಅನ್ವಯವಾಗುತ್ತದೆ.ಈ ಪ್ರಕರಣವು ಸ್ಥಿರಾಸ್ತಿಯ ಸಂಬಂಧದಲ್ಲಿನ ದಾವೆಗಳಿಗೆ ಅಥವಾ ಸ್ಥಿರಾಸ್ತಿಗೆ ಸಂಬಂಧಿಸಿದ ಡಿಕ್ರಿಯ ಅಮಲ್ಜಾರಿಗಾಗಿ ಹೂಡಿದ ದಾವೆಗಳಿಗೆ ಅನ್ವಯವಾಗುವುದಿಲ್ಲ.

(4) ಉಯಿಲನ್ನು ಲಗತ್ತಿಸಿ ಅಥವಾ ಉಯಿಲು ಇಲ್ಲದೆ ಪ್ರೊಬೇಟ್ ಅಥವಾ ಆಡಳಿತ ಪತ್ರಗಳನ್ನು ಪಡೆದುಕೊಳ್ಳುವುದಕ್ಕೆ ಕಾನೂನಿನ ಅಡಿಯಲ್ಲಿ ಅಗತ್ಯಪಡಿಸಿದ ಉಯಿಲಿನ ನಿರ್ವಾಹಕ ಅಥವಾ ದಾಯಗ್ರಾಹಿಯು ಭಾರತ ಉತ್ತರಾಧಿಕಾರ ಅಧಿನಿಯಮದ 212 ನೇ ಮತ್ತು 213 ನೇ ಪ್ರಕರಣದ ದೃಷ್ಟಿಯಿಂದ ಮೃತನಿಗೆ ಬಾಕಿ ಇರುವ ಋಣ ಅಥವಾ ಹಣದ ವಸೂಲಾತಿಗೆ ಉತ್ತರಾಧಿಕಾರ ಪ್ರಮಾಣ ಪತ್ರವನ್ನು ಮಂಜೂರು ಮಾಡಬಾರದು.

(5) ಮೃತನು ಹೂಡಿದ ದಾವೆಯನ್ನು ಮುಂದುವರೆಸುವುದಕ್ಕಾಗಿ ಅಥವಾ ದಾವೆ ಅಥವಾ ಅಮಲ್ಜಾರಿ ವ್ಯವಹರಣೆಗಳು ಇತ್ಯರ್ಥದಲ್ಲಿರುವ ಅವಧಿಯಲ್ಲಿ ಮರಣ ಹೊಂದಿದ ಡಿಕ್ರಿಧಾರಕನು ಹೂಡಿದ ಅಮಲ್ದಾರಿಯನ್ನು ಮುಂದುವರೆಸುವುದಕ್ಕಾಗಿ ಉತ್ತರಾಧಿಕಾರ ಪ್ರಮಾಣ ಪತ್ರದ ಅವಶ್ಯಕತೆ ಇರುವುದಿಲ್ಲ.

( 6) ಅಮಲ್ದಾರಿ ಅರ್ಜಿಯು ಇತ್ಯರ್ಥದಲ್ಲಿರುವ ಅವಧಿಯಲ್ಲಿ ಡಿಕ್ರಿಧಾರಕನು ಮರಣವನ್ನಪ್ಪಿದ್ದಲ್ಲಿ, ಅವನ ಕಾನೂನು ಸಮ್ಮತ ವಾರಸುದಾರರು ಅಥವಾ ಕಾನೂನು ಸಮ್ಮತ ಪ್ರತಿನಿಧಿಗಳು, ಉತ್ತರಾಧಿಕಾರ ಪ್ರಮಾಣ ಪತ್ರವನ್ನು ಹಾಜರುಪಡಿಸದೆ ಸಿವಿಲ್ ಪ್ರಕ್ರಿಯಾ ಸಂಹಿತೆಯ 146 ನೇ ಪ್ರಕರಣ ಮತ್ತು XXI ನೇ ಕ್ರಮಾದೇಶದ 16 ನೇ ನಿಯಮದ ಪ್ರಕಾರ ಮೃತ ಡಿಕ್ಕಿಧಾರಕನ ಸ್ಥಾನದಲ್ಲಿ ಅಧಿಕೃತವಾಗಿ ದಾಖಲಿಸಲು ಮೃತನ ಕಾನೂನು ಸಮ್ಮತ ವಾರಸುದಾರರು ಅಥವಾ ಕಾನೂನು ಸಮ್ಮತ ಪ್ರತಿನಿಧಿಗಳು ಹಕ್ಕುಳ್ಳವರಾಗಿರುತ್ತಾರೆ.

( 7) ಡಿಕ್ಕಿಧಾರಕನ ಅಥವಾ ತೀರ್ಪ ಋಣಿಯ ಮರಣದ ತರುವಾಯ ಅಮಲ್ದಾರಿ ವ್ಯವಹರಣೆಗಳು ರದ್ದಾಗುವುದಿಲ್ಲ ಎಂಬ ಕಾರಣಕ್ಕಾಗಿ ಸಂಹಿತೆಯ XXII ನೇ ಕ್ರಮಾದೇಶದ 3, 4 ಮತ್ತು 8 ನೇ ನಿಯಮಗಳು ಉಪಬಂಧಗಳು ಅಮಲ್ದಾರಿ ವ್ಯವಹರಣೆಗಳಿಗೆ ಅನ್ವಯವಾಗುವುದಿಲ್ಲ.

17. ಈ ಆದೇಶವನ್ನು ಮಾಡುವ ಮುಂಚೆ, ಈ ಪ್ರಸ್ತುತ ಮೊಕದ್ದಮೆಯಲ್ಲಿ, ಅರ್ಜಿದಾರರು ಸಿವಿಲ್ ಪ್ರಕ್ರಿಯಾ ಸಂಹಿತೆಯ XXII ನೇ ಕ್ರಮಾದೇಶದ 3 ನೇ ನಿಯಮದ ಅಡಿಯಲ್ಲಿ ಪ್ರಶ್ನಿತ ಅರ್ಜಿಯನ್ನು ದಾಖಲಿಸಿದ್ದಾರೆಂಬುದನ್ನು ಗಮನಕ್ಕೆ ತಂದುಕೊಳ್ಳುವ ಅವಶ್ಯಕವಾಗಿದೆ.ಸಿವಿಲ್ ಪ್ರಕ್ರಿಯಾ ಸಂಹಿತೆಯ XXII ನೇ ಕ್ರಮಾದೇಶದ 12 ನೇ ನಿಯಮದಲ್ಲಿ ಒಳಗೊಂಡ ನಿರ್ಬಂಧದ ದೃಷ್ಟಿಯಿಂದ ಸದರಿ ಉಪಬಂಧಗಳು ಅಮಲ್ಜಾರಿ ವ್ಯವಹರಣೆಗಳಿಗೆ ಅನ್ವಯವಾಗುವುದಿಲ್ಲ ಎಂಬುದು ಸಂಶಯಾತೀತ.ಆದಾಗ್ಯೂ, ಆ ಏಕೈಕ ಕಾರಣದ ಮೇಲೆ, ಅಧಿವಿಚಾರಣಾ ನ್ಯಾಯಾಲಯವು ಅರ್ಜಿಯನ್ನು ವಜಾಗೊಳಿಸಬಾರದಿತ್ತು. ಅಮಲ್ದಾರಿ ನ್ಯಾಯಾಲಯವು 142 ಮಲ್ಲಿಕಾರ್ಜುನ (ಮೃತ) ಕಾನೂನು ಸಮ್ಮತ ವಾರಸುದಾರರು -ವಿರುದ್ಧ ವಿಜಯಲಕ್ಷ್ಮೀ @ ಜಯಶ್ರೀ 819

ನ್ಯಾಯೋದ್ದೇಶವನ್ನು ಸಾಧಿಸಲು ಪರಿಹಾರವನ್ನು ರೂಪಿಸುವುದಕ್ಕೆ ತನ್ನ ಅಧಿಕಾರ ವ್ಯಾಪ್ತಿಯೊಳಗೆ ಚೆನ್ನಾಗಿಯೇ ನಿರ್ವಹಿಸಿದೆ.ಪ್ರಕ್ರಿಯಾತ್ಮಕ ಕಾನೂನು, ನ್ಯಾಯದ ಅಡಿಯಾಳು ಮಾತ್ರವಾಗಿದೆ.ಅವನು ಅಥವಾ ಅವಳಾಗಲೀ ಅನ್ಯಥಾ ಹಕ್ಕುಳ್ಳವರಾಗಿದ್ದ ಪಕ್ಷದಲ್ಲಿ, ಕಾನೂನು ಉಪಬಂಧಗಳನ್ನು ತಪ್ಪಾಗಿ ಉಲ್ಲೇಖಿಸಿದ ಮಾತ್ರಕ್ಕೆ ಅವರನ್ನು ಪರ್ಯಾಯ ಪರಿಹಾರಕ್ಕಾಗಿ ಅನರ್ಹರನ್ನಾಗಿ ಮಾಡಲಾಗುವುದಿಲ್ಲ.ಮೇಲೆ ಚರ್ಚಿಸಿದ ಕಾನೂನು ಪ್ರತಿಪಾದನೆಯ ದೃಷ್ಟಿಯಲ್ಲಿ, ಡಿಗ್ರಿಧಾರಕನು ಸ್ವತಃ ಅಮಲ್ದಾರಿ ಅರ್ಜಿಯನ್ನು ದಾಖಲಿಸಿದ್ದು, ಅವನ ಮರಣದ ನಂತರ ಅವನ ಕಾನೂನು ಸಮ್ಮತ ವಾರಸುದಾರರು ಅಥವಾ ಕಾನೂನು ಸಮ್ಮತ ಪ್ರತಿನಿಧಿಗಳು ಎಂದರೆ ಅರ್ಜಿದಾರರು ಸಿವಿಲ್ ಪ್ರಕ್ರಿಯಾ ಸಂಹಿತೆಯ XXI ನೇ ಕ್ರಮಾದೇಶದ 16 ನೇ ನಿಯಮದೊಂದಿಗೆ ಓದಲಾದ 146 ನೇ ಪ್ರಕರಣದ ಅಡಿಯಲ್ಲಿ ಅವರು ಅರ್ಜಿಸಲ್ಲಿಸುವ ಮೂಲಕ ಹಕ್ಕು ಎಂಬಂತೆ ಅಧಿಕೃತವಾಗಿ ಮೃತನ ಸ್ಥಾನದಲ್ಲಿ ದಾಖಲಿಸಲು ಹಕ್ಕುಳ್ಳವರಾಗಿರುವರು.ಈ ಪ್ರತಿಪಾದನೆಯ ದೃಷ್ಟಿಯಲ್ಲಿ, ಅಮಲ್ಜಾರಿ ನ್ಯಾಯಾಲಯ ಅರ್ಜಿದಾರರು ದಾಖಲಿಸಿದ ಅರ್ಜಿಯನ್ನು ತಿರಸ್ಕರಿಸಿರುವುದು ಸಮಂಜಸವಾದ ಕ್ರಮವಾಗಿರುವುದಿಲ್ಲ.

18. ಮೇಲಿನ ವಾಸ್ತವಿಕ ಅಂಶಗಳ ಮತ್ತು ಚರ್ಚಿಸಲಾದ ಕಾನೂನು ಪ್ರತಿಪಾದನೆಯ ಹಿನ್ನಲೆಯಲ್ಲಿ ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶ ಮತ್ತು ಜೆಎಂಎಫ್ಸಿ, ಇಂಡಿ ಇವರು, ಉತ್ತರಾಧಿಕಾರ ಪ್ರಮಾಣಪತ್ರವನ್ನು ಹಾಜರು ಪಡಿಸುವವರೆಗೂ ಅಮಲ್ಜಾರಿ ವ್ಯವಹರಣೆಗಳನ್ನು ನಿಲ್ಲಿಸಿ, ಉತ್ತರಾಧಿಕಾರ ಪ್ರಮಾಣ ಪತ್ರವನ್ನು ಮತ್ತು ತತ್ಪರಿಣಾಮದ ಆದೇಶವನ್ನು ಪಡೆಯುವಂತೆ ನಿರ್ದೇಶಿಸಿ ಹೊರಡಿಸಿದ ಪ್ರಶ್ನಿತ ಆದೇಶವು ವಜಾಗೊಳ್ಳಲು ಅರ್ಹವಾಗಿದೆ.ತದನುಸಾರವಾಗಿಯೇ, ಅರ್ಜಿಯನ್ನು ಪುರಸ್ಕರಿಸಲಾಗಿದೆ.ದಿನಾಂಕ 23.08.2018 ರಂದು ಹೊರಡಿಸಿದ ಪ್ರಶ್ನಿತ ಆದೇಶವನ್ನು ವಜಾಗೊಳಿಸಲಾಗಿದೆ.ಅರ್ಜಿದಾರರಿಗೆ ಮೂಲ ಡಿಗ್ರಿದಾರನ ಕಾನೂನು ಸಮ್ಮತ ಪ್ರತಿನಿಧಿಗಳಾಗಿ ಅಧಿಕೃತವಾಗಿ ದಾಖಲಿಸಲು ಅನುಮತಿಸಲಾಗಿದೆ.ಅಧಿವಿಚಾರಣಾ ನ್ಯಾಯಾಲಯವು, ಕಾನೂನಿಗನುಸಾರವಾಗಿ ಅಮಲ್ದಾರಿಯನ್ನು ಮುಂದುವರೆಸತಕ್ಕದ್ದು.